ಪಿಂಕಿ, ಮಲಪ್ರಭಾ





# ಕುರಾಶ್, ವುಸು, ಸೆಪಕ್ ಟಕ್ರಾ..!

**ಹೆಸರೇ ಕೇಳಿರದ ಕ್ರೀಡೆಗಳೆಲ್ಲ ಈ ಸಲ ಏಷ್ಯನ್ ಗೇಮ್ಸ್‌ನಲ್ಲಿ ಸೇರ್ಪಡೆಯಾಗಿವೆ. ಭಾರತೀಯ ಕ್ರೀಡಾಳುಗಳೂ ಈ ಕ್ಷೇತ್ರದಲ್ಲೂ ಜಯಿಸಿ ಪದಕ ಗೆದ್ದಿದ್ದಾರೆ!**

**■ ನಾಗೇಶ್ ಶೆಣೈ**



ಇಂಡೋನೇಷ್ಯಾದ ಜಕಾರ್ತಾ ಮತ್ತು ಪಾಲೆಂಬಂಗ್‌ನಲ್ಲಿ ನಡೆದ 18ನೇ ವರ್ಷದ ಕ್ರೀಡೆಗಳಲ್ಲಿ ಜನಸಾಮಾನ್ಯರಿಗೆ ಪರಿಚಿತವಲ್ಲದ, ಆದರೆ ಕೆಲವು ದೇಶಗಳಲ್ಲಿ ಹೆಚ್ಚು ಪ್ರಚಲಿತವಿರುವ ಆಟಗಳಿದ್ದವು. ಭಾರತ ಏಳು ಪದಕಗಳನ್ನು ಇಂಥ ಆಟಗಳಲ್ಲಿ ಗೆದ್ದುಕೊಂಡಿರುವುದು ಗಮನಾರ್ಹ. ಬಡ ರೈತರ ಮಕ್ಕಳು ಇಂಥ ಕ್ರೀಡೆಗಳಲ್ಲಿ ಹೆಚ್ಚಾಗಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಸೆಪಕ್ ಟಕ್ರಾದಲ್ಲಿ ಪದಕ ಗೆದ್ದ ತಂಡದ ಆಟಗಾರ ರಿಕ್ಷಾ ಚಾಲಕ. ಪದಕ ಕೊರಳಿಗೇರಿಸಿಕೊಂಡ ಈ ಆಟಗಾರರು ತಾಯ್ನಾಡಿನ ಹೀರೊಗಳಾಗಿದ್ದಾರೆ.

### ಹೆಸರು ಕೇಳಿದ್ದೇ ವಿರಳ

ಜೂಡೊ ಹೋಲುವ ಮಧ್ಯ ಏಷ್ಯದ ಕ್ರೀಡೆ ‘ಕುರಾಶ್’. ಉಜ್ಬೆಕಿಸ್ತಾನದ ಈ ಜನಪದ ಕ್ರೀಡೆ ಏಷ್ಯನ್ ಗೇಮ್ಸ್‌ನಲ್ಲಿ ಸೇರ್ಪಡೆಗೊಂಡಿದ್ದು ಇದೇ ಮೊದಲ ಬಾರಿ. ಭಾರತ ಈ ಆಟದಲ್ಲಿ ಒಂದು ಬೆಳ್ಳಿ, ಒಂದು ಕಂಚಿನ ಪದಕ ಗೆದ್ದುಕೊಂಡಿದೆ.

ಬಾಕ್ಸಿಂಗ್ ಮಾದರಿಯ– ಚೀನಾದ ಸಮರಕಲೆ ವುಶುನಲ್ಲಿ ಇದೇ ಮೊದಲ ಬಾರಿ ನಾಲ್ಕು ಕಂಚಿನ ಪದಕಗಳನ್ನು ಬಾಚಿಕೊಂಡಿದೆ. 2006ರ ದೋಹಾ ಕ್ರೀಡೆಗಳ ಸಂದರ್ಭದಲ್ಲಿ ವುಶು ಸೇರ್ಪಡೆಗೊಂಡಿತ್ತು. ಮೊದಲ ಎರಡು ಕ್ರೀಡೆಗಳಲ್ಲಿ ಭಾರತ ಪದಕ ಗೆಲ್ಲಲು ವಿಫಲವಾಗಿತ್ತು. ಕಳೆದ ಬಾರಿ (2014) ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡಿತ್ತು. ಈ ಬಾರಿ ದುಪ್ಪಟ್ಟಾಗಿದೆ.

ವಾಲಿಬಾಲ್ ಆಟವನ್ನು ಹೋಲುವ ಸೆಪಕ್ ಟಕ್ರಾ ಟೀಮ್ (ರೆಗು) ವಿಭಾಗದಲ್ಲಿ ಒಂದು ಕಂಚಿನ ಪದಕವೂ ಭಾರತ ಆಟಗಾರರ ಕೊರಳಿಗೇರಿದೆ. 1990ರ ಬೀಜಿಂಗ್ ಏಷ್ಯನ್ ಕ್ರೀಡೆಗಳಲ್ಲಿ ಈ ಆಟ ಸೇರ್ಪಡೆಗೊಂಡಿತ್ತು. ಆಗ್ನೇಯ ಏಷ್ಯದ ರಾಷ್ಟ್ರಗಳಲ್ಲಿ

